Doc-480
T-P-2

Reg No B G 155 19 — 5 — 72

55th Year of Publication ★ 'Satyavadi' daily, Mysore 4

In the State – The First
Golden Jubilee
Celebrated Paper
★
News, Views, Dharmic
Moral Ethical Matters

ಸತ್ಯವಾದಿ

ರಾಜ್ಯದಲ್ಲಿ ಪ್ರಥಮ
ಸುವರ್ಣ
ಮಹೋತ್ಸವ
ಆಚರಿಸಿದ
ಪತ್ರಿಕೆ

ಸ್ಥಾಪಕರು: ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕರು: ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಮೈಸೂರಿಗೆ ಕೇಂದ್ರದ ಸಹಾಯ

ಹಿಂದುಳಿದ ವರ್ಗಗಳ ಪ್ರದೇಶಕ್ಕೆ ನಿರ್ಬಂಧ

ತಿರುಪತಿ— ಶತಮಾನಗಳಿಂದ ಬಂದಿರುವ ಸಂಪ್ರದಾಯದಂತೆ, ಎಂಡೋಮೆಂಟು ಕಮಿಷನರೊಡನೆ ಆಲೋಚನೆ ನಡೆಸಿ, ಹಿಂದುಳಿದವರನ್ನು ಶ್ರೀ ವೆಂಕಟೇಶ್ವರ ಸ್ವಾಮಿ ದೇವಾಲಯದ ಮುಖಗೋಪುರದ ಮುಂದಕ್ಕೆ ಬಿಡದಿರಲು ನಿರ್ಧರಿಸಲಾಗಿದೆ ಎಂದು ಎಂದು ದೇವಸ್ಥಾನದ ಕಾರ್ಯಕಾರಿ ಅಧಿಕಾರಿಗಳು ಪ್ರಕಟಿಸಿದ್ದಾರೆ.

★

ದುರಂತ

ಬಳ್ಳಾರಿ.... ಕಳ್ಳಬಟ್ಟಿ ಸಂಬಂಧದಲ್ಲಿ ವರ್ತಮಾನ ಕೊಡುತ್ತಿದ್ದವನನ್ನು ಈ ಸಂಬಂಧದ 8 ಮಂದಿ ಕಳ್ಳವ್ಯಾಪಾರಿಗಳು ಕಲ್ಲು ಮತ್ತು ದೊಣ್ಣೆಯಿಂದ ಹೊಡೆದು ಸಾಯಿಸಿ ತಲೆತಪ್ಪಿಸಿಕೊಂಡಿದ್ದಾರೆ.

★

ರೈಲ್ವೇ ವಿಷಯ

ನವದೆಹಲಿ— ರೈಲ್ವೆಗಳಲ್ಲಿ ಇಳಿಮುಖವಾಗುತ್ತಿರುವ ಲಾಭ ಮತ್ತು ಭ್ರಷ್ಟಾಚಾರಗಳ ಬಗ್ಗೆ ಲೋಕಸಭೆಯಲ್ಲಿ ಕಾಂಗ್ರೆಸ್ ಮತ್ತು ವಿರೋಧ ಸದಸ್ಯರು ಕಳವಳ ವ್ಯಕ್ತಪಡಿಸಿದರು.

○

ಚಿನ್ನ ಮತ್ತು ವಜ್ರ

ನವದೆಹಲಿ— ಭಾರತವು 71–72ರಲ್ಲಿ 3525687 ಗ್ರಾಂ ಚಿನ್ನವನ್ನೂ ಮತ್ತು 19722 ಕ್ಯಾರಟ್ ವಜ್ರವನ್ನೂ ಉತ್ಪಾದಿಸಿತೆಂದು ಲೋಕಸಭೆಯಲ್ಲಿ ತಿಳಿಸಲಾಯಿತು

★

ಬಿಸಲು ತಾಪ

ನವದೆಹಲಿ— ಉತ್ತರ ಭಾರತದಲ್ಲಿ ಒಂದು ವಾರದಿಂದ ಬಿಸಲು ತಾಪದಿಂದ 169 ಮಂದಿ ಸತ್ತಿರುವರು.

ಹೀನಾಮಾನ ಕೃತ್ಯ

ಬೆಂಗಳೂರು— ದೊಡ್ಡ ಬೊಮ್ಮಸಂದ್ರ ಗ್ರಾಮದಲ್ಲಿನ ಒಂದು ಮನೆಗೆ ಒಬ್ಬ ಕುಡುಕನು ಬಲಾತ್ಕಾರವಾಗಿ ಪ್ರವೇಶಿಸಿ, ಅಲ್ಲಿದ್ದ ಮಹಿಳೆಯನ್ನು ಸೊಡೆದು ಬಾಯಿಗೆ ಬಟ್ಟೆ ತುರುಕಿ, ಅವಳೆದುರಿಗೆ ಅವಳ ಮಕ್ಕಳು ಹುಡುಗಿಯ ಮೇಲೆ ಪಾನಭಂಗ ಅತ್ಯಾಚಾರನಡೆಸಿದನೆಂಬ ವರದಿಯಾಗಿದೆ

★

ಅಭಾವ ಭಾಗಗಳಿಗೆ

ನವದೆಹಲಿ— ದೇಶದಲ್ಲಿನ ಅಭಾವ ಭಾಗಗಳಿಗೆ ಪರಿಹಾರ ನೀಡಲು ಸೂಕ್ತ ಮಾರ್ಗಗಳನ್ನು ಸರ್ಕಾರ ಕೈಗೊಳ್ಳುತ್ತಿದೆ ಎಂದು ಲೋಕಸಭೆಯಲ್ಲಿ ತಿಳಿಸಲಾಯಿತು

●

ಹೊಸ ತೆರಿಗೆ

ನವದೆಹಲಿ— 72–73ರ ಬಜೆಟ್‌ನಲ್ಲಿಯ ರೂ 171 ಕೋಟಿ ಹೊಸ ತೆರಿಗೆ ಯೋಜನೆಗೆ ಲೋಕಸಭೆಯು ಅನುಮತಿ ಕೊಟ್ಟಿತು.

★

ಎಂ ಪಿ ಗಳ ನಿಲುವು

ನವದೆಹಲಿ— ಗಡಿ ಪ್ರಶ್ನೆಯ ವಿಚಾರಣೆಯಲ್ಲಿ ಮಹಾಜನ ತೀರ್ಪಿಗೆ ಜಾರಿಗೆ ಬರಬೇಕೆಂದು ಪಾರ್ಲಿಮೆಂಟಿನ ಮೈಸೂರಿನ ರಾಜ್ಯದ ಸದಸ್ಯರು ಭದ್ರವಾದ ನಿಲುವನ್ನು ತಾಳಿದ್ದಾರೆ.

★

ಬಂಗ್ಲಾದೇಶಕ್ಕೆ ನೆರವು

ಢಾಕಾ— ಭಾರತ – ಬಂಗ್ಲಾದೇಶವು ರೂ 24 10 ಕೋಟಿ ಸಾಲದ ಒಪ್ಪಂದಕ್ಕೆ ರುಜು ಮಾಡಿದವು.

★

ಸಭಾ ಪರಿತ್ಯಾಗ

ನವದೆಹಲಿ— ಒಂದು ಕಲ್ಕತ್ತಾ ಕೈಗಾರಿಕಾ ಸಂಸ್ಥೆಯು ಪಡಿಳಿತ ಪಕ್ಷದ ಚುನಾವಣಾ ಭಿತ್ತಿಪತ್ರಗಳ ಮುದ್ರಣಕ್ಕೆ ರೂ 5 ಲಕ್ಷ ಖರ್ಚುಮಾಡಿದೆ ಎಂಬ ಶ್ರೀ ಜ್ಯೋತಿರ್ಮಾಯಿ ಬಾಸುರವರು ಮಾಡಿರುವ ಆರೋಪದ ಬಗ್ಗೆ ಸರಕಾರ ಹೇಳಿಕೆ ಕೊಡುವಂತೆ ಬಲಾತ್ಕರಿಸಲು ಸ್ಪೀಕರರು ತಿರಸ್ಕರಿಸಿದ್ದನ್ನು ಪ್ರತಿಭಟಿಸಿ ಎಲ್ಲ ವಿರೋಧ ಪಕ್ಷಗಳವರೂ ಸಭಾ ಪರಿತ್ಯಾಗ ಮಾಡಿದರು.

○

ಇದೊಂದು ಸರ್ವೆ

ನವದೆಹಲಿ— ದೇಶದಲ್ಲಿನ ಪಟ್ಟಣ ಮತ್ತು ಗ್ರಾಮಾಂತರ ಭಾಗಗಳಲ್ಲಿಯ ನಿರುದ್ಯೋಗ, ಉದ್ಯೋಗ, ಕೆಳಮಟ್ಟದ ಉದ್ಯೋಗ ವಿಷಯದಲ್ಲಿ ಅಂಕಿಅಂಶ ಸಂಗ್ರಹಿಸಲು ರಾಷ್ಟ್ರೀಯ ಮಾದರಿ ಸರ್ವೇ ಸಂಸ್ಥೆಯು ಈ ವರ್ಷ ಸರ್ವೇ ನಡೆಸುವುದೆಂದು ಪ್ರಧಾನಿ ಇಂದಿರಾರವರು ರಾಜ್ಯ ಸಭೆಯಲ್ಲಿ ತಿಳಿಸಿದರು.

○

ಫುಟ್‌ಬಾಲ್ ಹೈ ಸ್ಕೂಅ್

ಫೆಡರಲ್ ರಿಪಬ್ಲಿಕ್ ಜರ್ಮನಿಯಲ್ಲಿ ಕಾಲ್ಚೆಂಡು ಆಟಕ್ಕಿರುವ ಉತ್ಸಾಹವನ್ನು ವೃದ್ಧಿಗೊಳಿಸಲೂ ಮತ್ತು ಕಿರಿಯ ಉತ್ಸಾಹಿ ಬಾಲಕರನ್ನು ಕಾಲ್ಚೆಂಡಾಟದಲ್ಲಿ ಪ್ರವೀಣರನ್ನಾ ಮಾಡಿ ಆದೇ—ಉದ್ಯೋಗವನ್ನಾಗಿ ಮಾಡಿಕೊಳ್ಳುವಂತೆ ಮಾಡಲೂ ಜರ್ಮನಿಯು ಕಳೆದ ಕೆಲವು ವರ್ಷಗಳಲ್ಲಿ ಪಡೆದಿರುವ ಛಾಂಪಿಯರ್ ಪ್ರಶಸ್ತಿಯನ್ನು ನಿಲ್ಲಿಸಿಕೊಳ್ಳಲೂ ಕಾಲ್ಚೆಂಡಾಟದ ಶಿಕ್ಷಣವನ್ನು ಕೊಡುವುದಕ್ಕಾಗಿಯೇ ಒಂದು ಶಾಲೆಯನ್ನು ಪ್ರಾರಂಭಿಸಿದೆ.

○

ಕೆಲಸವಿಲ್ಲದ ಉಪಾಧ್ಯಾಯರು

ನವದೆಹಲಿ— 1971 ನೇ ಡಿಸೆಂಬರು 31 ರಲ್ಲಿ ಉದ್ಯೋಗ ವಿನಿಮಯ ರಿಜಿಸ್ಟರಿನಲ್ಲಿ 151240 ತರಬೇತಾದ ಉಪಾಧ್ಯಾಯರಿದ್ದರೆಂದು ಪಾರ್ಲಿಮೆಂಟಿನಲ್ಲಿ ತಿಳಿಸಲಾಯಿತು.

○

ಕೋಮುವಾರು ಗಲಭೆಗಳು

ನವದೆಹಲಿ— 1971 ನೇ ಮೇಯಿಂದ 1972 ನೇ ಫೆಬ್ರವರಿವರೆಗೆ ಕೋಮುವಾರು ಗಲಭೆಯ 10 ಘಟನೆಗಳು ಜರಿದು 3 ಮಂದಿ ಸತ್ತರೆಂದು ಪಾರ್ಲಿಮೆಂಟಿನಲ್ಲಿ ತಿಳಿಸಲಾಯ್ತು.

●

ರಾಜ್ಯಕ್ಕೆ ನೆರವು

ನವದೆಹಲಿ— ಮೈಸೂರು ರಾಜ್ಯವು 4 ನೇ ಯೋಜನೆಗೆ ವಿಶೇಷ ನೆರವಾಗಿ ರೂ 60.52 ಕೋಟಿ ಪಡೆಯಲು ಅರ್ಹವಾಗಿದೆಯೆಂದೂ, ಯೋಜನೆಯಲ್ಲದ ವಿಚಾರಕ್ಕೆ ರೂ 45 22 ಕೋಟಿಗೆ ಅಲ್ಲವೆಂದೂ ರಾಜ್ಯಸಭೆಯಲ್ಲಿ ತಿಳಿಸಲಾಯಿತು.

★

ಕಾರ್ಯಕರ್ತರಿಗೆ ಹಿತಬೋಧೆ

ಚಿಕ್ಕಮಗಳೂರು— ಕಾಂಗ್ರೆಸ್ ಕಾರ್ಯಕರ್ತರು ಜಾತಿ ಮತ ಲಿಕ್ಕಿಸದೆ ಬಡವರನ್ನೂ ಅಧೋಗತಿಯಲ್ಲಿರುವವರನ್ನೂ ಸೇವಿಸಬೇಕೆಂದೂ ಅವರಿಗೆ ಪ್ರವಾಸ ಮಂತ್ರಿ ಶ್ರೀ ಅಜೀಜ್ ಸೇಟ್‌ರವರು ತಿಳಿಸಿದರು.

★

ರಂಗೋಲಿ ಕಲಾ ಪ್ರದರ್ಶನ

ಮೈಸೂರು— ಕುಶಲಕಲಾವಿದೆ ಶ್ರೀಮತಿ ನಾಗಮ್ಮ ಬಸವರಾಜಯ್ಯನವರು ವಸ್ತು ಪ್ರದರ್ಶನ ಕಟ್ಟಡದಲ್ಲಿ ಏರ್ಪಡಿಸಿರುವ ರಂಗೋಲಿ ಕಲಾ ಪ್ರದರ್ಶನವನ್ನು ಜಿಲ್ಲಾಧಿಕಾರಿ ಶ್ರೀ ಡಿ. ಬಾಲಗೋಪಾಲ್‌ರವರು ಉದ್ಘಾಟಿಸಿ ಪ್ರಶಂಸಿಸಿದರು

ನಾಧುಗಳ ನಡತೆ

ಸೂರ್ಯನು ಅಸ್ತನಾದ ನಂತರ, ಆಕಾಶವು ಮತ್ತೂ ಕತ್ತಲಾಗಿ, ಮೋಡಗಳು ಬೆದರಿಕೆ ಹಾಕಿದ ನಂತರ, ಮಳೆ ಸುರಿಯಿತು. ಪ್ರಯಾಣೀಕನಿಗೆ ಏನು ಮಾಡುವುದೋ, ಎಲ್ಲಿಗೆ ಹೋಗುವುದೋ ಗೊತ್ತಾಗಲಿಲ್ಲ. ಎಲ್ಲೆಲ್ಲೂ ಕಗ್ಗತ್ತಲೆ ಮಾತ್ರ ಮಾತ್ರ ಕಾಣುತ್ತಿತ್ತು. ಪ್ರಯಾಣೀಕನು ಮೆಲ್ಲಗೆ ಸ್ಥಳ ಸೇರಿದನು. ಅದು ನಿಜಕ್ಕೂ ಒಂದು ಗುಡಿಸಲು ; ಆದರೆ ಚಿಕ್ಕದು : ಒಳಗೆ ಒಂದು ದೀಪ ಮಿಣುಗುತ್ತಿತ್ತು. ಪ್ರಯಾಣೀಕನು ಬಾಗಲು ತಟ್ಟಿ ಪ್ರವೇಶಕ್ಕೆ ಪ್ರಾರ್ಥಿಸಿದನು ; ಒಳಗಿದ್ದ ಮುದುಕನು ಬರಬಹುದೆಂದು ತಿಳಿಸಿದನು ; ಸ್ಥಳ ಬಹಳ ಚಿಕ್ಕದಾಗಿದೆ ; ಒಬ್ಬನು ಮಲಗುವಷ್ಟು ಜಾಗ ಮಾತ್ರವಿದೆ : ಕೂತುಕೊಂಡೇ ರಾತ್ರಿ ಕಳೆಯೋಣ ಎಂದು ಹೇಳಿದನು. ಸ್ವಲ್ಪ ಹೊತ್ತಿನ ನಂತರ, ಮತ್ತೊಬ್ಬ ಬಾಗಿಲು ತಟ್ಟಿ, ನಾನು ಒಳಗೆ ಬರಬಹುದೇ ಎಂದನು. ಮುದುಕನು– ನಾವು ಇಲ್ಲಿ ಈಗಲೇ ಇಬ್ಬರಿದ್ದೇವೆ ; ನಾವು ಕೇವಲ ಕೂತುಕೊಳ್ಳಲು ಸಾಧ್ಯವಿದೆ ; ಬನ್ನಿ : ನಾವೆಲ್ಲರೂ ರಾತ್ರಿಯೆಲ್ಲಾ ಕಾಲ ಕಳೆಯುವಷ್ಟು ಜಾಗವಿದೆ, ಎಂದು ಹೇಳಿದನು. ಹೊಸ ಅಪರಿಚಿತನೂ ಒಳಗೆ ಬಂದನು. ಎಲ್ಲ ಮೂವರೂ ರಾತ್ರಿಯೆಲ್ಲಾ ನಿಂತುಕೊಂಡೇ ಆನಂದದಿಂದ ಕಳೆದರು ; ಆವರೆಲ್ಲರೂ ಸುಖವಾಗಿದ್ದರು.

ವುಡ್‌ಲ್ಯಾಂಡ್ 19-5-72ರಿಂದ ಆಮೋಘ 3ನೇ ವಾರ

.... ಚಿತ್ತಾಕರ್ಷಕ ಕನ್ನಡ ಚಿತ್ರ ....

ಹೃದಯ ಸಂಗಮ

ನಟಸಾರ್ವಭೌಮ ರಾಜಕುಮಾರ್, ಭಾರತಿ, ಬಾಲಕೃಷ್ಣ, ಅಶ್ವತ್ಥ್, ಪಂಡರಿಬಾಯಿ
ನಿರ್ದೇಶನ : ರಾತಿ ಸಹೋದರರು ನಿರ್ಮಾಪಕರು : ಎಂ ಜೆ ಎಂ ಸಹೋದರರು
ಪ್ರತಿ ದಿನ 3 ಪ್ರದರ್ಶನಗಳು

ಬೆಳಗಿನ ಪ್ರದರ್ಶನ ಪ್ರತಿ ದಿನ 10-30 ಮಹಾಸತಿ ಅರುಂಧತಿ

ಅಪೆರಾ 2 ನೇ ವಾರ

.... ಮನಮೋಹಕ ಕನ್ನಡ ಚಿತ್ರ ....

ಭಲೇ ರಾಣಿ

ನಟವರ್ಗ— ಉದಯಕುಮಾರ್, ಶ್ರೀನಾಥ್, ಅಶ್ವತ್ಥ್, ದಿವಂಗತ ನಾಗಪ್ಪ
ಶಕ್ತಿಪ್ರಸಾದ್, ರಮೇಶ್, ತೂಗುದೀಪ ಶ್ರೀನಿವಾಸ್, ಪಂಡರೀಬಾಯಿ
ದೇವಿಕ, ಕನಕಾದೇವಿ, ಬೇಬಿ ರಾಣಿ, ಮೈಸೂರಿನ ಜೈ ॥ ಮೂಗ
ದಿನ 3 ಆಟಗಳು

ಅಖಿಲ ಭಾರತದಲ್ಲಿ ಕೂಡಲೇ
ಗೋವಧೆ ನಿಷೇಧವಾಗಲಿ

Edited Printedand Published by Dharmapracharanirata
M S Krishna Rao (Propretor) at the Satyavadi Press
Chamarajapuram Mysore 4

' ಮಾನವನು ಕೀಳು ಸೃಷ್ಟಿಯ ಧಣಿ, ಶ್ರೇಷ್ಠನೆನ್ನುವುದು ಸೊಕ್ಕಿನ' ಕಲ್ಪನೆ '
ಬದುಕಿಗೆ ಮಹತ್ ಶಕ್ತಿ ಕೊಡಲ್ಪಟ್ಟ ಅವನು ಮೃಗಸಾಮ್ರಾಜ್ಯದ ಧರ್ಮಕರ್ತ
— ಮಹಾತ್ಮಾ ಗಾಂಧಿ

ಈ ಸಂದೇಶ ಹೊತ್ತ ಚಿತ್ರ ಸಂದೇಶ್ ರವರ ಜ್ಞೋಚ್ಚಲು ಚಿತ್ರ

ಅನೆ - ಹುಡುಗ

Protect the Cow

Contribute Liberally
to the National Defence Fund

Help The Gorakshana



— Humanitarian Propoganda Monthly ....

Quality Printing Neat Binding

Lakshminarasimha Press

Sivarampet, Mysore

SHAKTI
SUDHA

A Superb Tonic